ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,
ಶ್ರೀರಂಗಪಟ್ಟಣ

ಸಿ.ಸಿ. 662 /2014

| | |
|---|---|
| ಸಿ.ಡಬ್ಲ್ಯೂ : | 2 |
| ಪಿ.ಡಬ್ಲ್ಯೂ : | 7 |

| | | |
|---|---|---|
| ಸಾಕ್ಷಿದಾರರ ಹೆಸರು | : | ಗವಿಸಿದ್ದು ಎಂ.ಎ |
| ತಂದೆ/ ಪತಿಯ ಹೆಸರು | : | ಲೇಟ್ ಅಂದಾನಯ್ಯ |
| ವಯಸ್ಸು | : | 35 ವರ್ಷ |
| ವೃತ್ತಿ | : | ಚಾಲಕ |
| ವಾಸ | : | ಮಹಾದೇವಪುರ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 17.03.2026**

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ**

ನ್ಯಾಯಾಲಯದ ಮುಂದಿರುವ 1, 2, 4, 5 ನೇ ಆರೋಪಿಗಳು ಗೊತ್ತು. 6 ನೇ ಆರೋಪಿ ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಸಾಕ್ಷಿಯು 6 ನೇ ಆರೋಪಿಯನ್ನು ಗುರುತಿಸುವುದರಲ್ಲಿ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ. ಚಾಸಾ.1 ಗೊತ್ತು.

ಈಗ್ಗೆ ಸುಮಾರು 12 ವರ್ಷಗಳ ಹಿಂದೆ ನಾನು ಮಹಾದೇವಪುರದ ಚಾಸಾ.1 ರವರ ಮನೆಯ ಹತ್ತಿರ ಹೋಗುತ್ತಿದ್ದಾಗ ಚಾಸಾ.1 ಮತ್ತು ಆರೋಪಿತರು ಜಗಳ ಮಾಡುತ್ತಿದ್ದರು, ಆದರೆ ಯಾವ ವಿಷಯಕ್ಕೆಂದು ನನಗೆ ಗೊತ್ತಿಲ್ಲ. ಸದರಿ ಗಲಾಟೆಯಿಂದ ಚಾಸಾ.1 ರವರಿಗೆ ಗಾಯಗಳಾಗಿದ್ದು ಆನಂತರ ನಾನು ಚಾಸಾ.1 ರವರನ್ನು ಮಂಡ್ಯದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆಯು ದಿನಾಂಕ 16.09.2014 ರ

ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿಯಾಗಿದ್ದು ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ನಿಪಿ.9 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಅದೇ ದಿನ ಬೆಳಗ್ಗೆ 9.30 ರಿಂದ 10.00 ಗಂಟೆಯವರೆಗೆ ಮಾಡಿರುತ್ತಾರೆ. ಸದರಿ ಪಂಚನಾಮೆಯ ಕಾಲಕ್ಕೆ ಪೊಲೀಸರು ಕಬ್ಬಿಣದ ಒಂದು ರಾಡು, ಒಂದು ದೊಣ್ಣೆ ಮತ್ತು ಚಾಸಾ.1 ರವರ ಟೀ ಶರ್ಟ್ ಬನಿಯನ್ ಮತ್ತು ಟವಲ್ ಅನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೆ. ಕಬ್ಬಿಣದ ಒಂದು ರಾಡು, ಒಂದು ದೊಣ್ಣೆ ಅವುಗಳು ಈಗಾಗಲೇ ಎಂ.ಒ.1 ಮತ್ತು 2 ಎಂದು ಗುರುತಿಸಿದ್ದು ಚಾಸಾ.1 ರವರ ಟೀ ಶರ್ಟ್ ಬನಿಯನ್ ಮತ್ತು ಟವಲ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಎಂ.ಒ.3 ರಿಂದ 5 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಾನು, ಪೊಲೀಸರು, ಚಾಸಾ.6 ಮತ್ತು 7 ರವರು ಇದ್ದೆವು. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು)

## ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದ

ದಿನಾಂಕ 14.09.2014 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನಾನು ಚಾಸಾ.1 ರವರ ಮನೆಯ ಮುಂದೆ ಹೋಗುತ್ತಿದ್ದೆನು ಎಂದರೆ ಸರಿ. ಆಗ ಚಾಸಾ.1 ರವರಿಗೆ ಆರೋಪಿತರು ಮರದ ದೊಣ್ಣೆ ಮತ್ತು ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ . ಆರೋಪಿತರು ಚಾಸಾ.1 ರವರಿಗೆ ಅವ್ಯಾಚ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಚಾಸಾ.1 ರವರನ್ನು 1 ನೇ ಆರೋಪಿ ಅಡ್ಡಗಟ್ಟಿ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಹಲ್ಲೆಯಿಂದ ಚಾಸಾ.1 ರವರ ಟೀ ಶರ್ಟ್ ಬನಿಯನ್ ಮತ್ತು ಟವಲ್ ಗಳಿಗೆ ರಕ್ತವಾಗಿರುತ್ತದೆ ಎಂದರೆ ಸರಿ. ಸದರಿ ಗಲಾಟೆಗೆ ಸಂಬಂಧಿಸಿದಂತೆ ಚಾಸಾ.1 ರವರು ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಆರ್.ಎಸ್. ವಕೀಲರಿಂದ

ಘಟನೆ ಆಯಿತು ಎಂದು ಹೇಳಲಾದ ಸ್ಥಳದ ನಿಖರವಾದ ಹೆಸರನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಚಾಸಾ.1 ಮತ್ತು ಆರೋಪಿತರ ನಡುವೆ ಯಾವ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ನಾನು ಪೊಲೀಸರ ಮುಂದೆ ಆರೋಪಿತರ ಮತ್ತು ಚಾಸಾ.1 ರವರ ನಡುವೆ ಮಹಾದೇವಪುರ ಗ್ರಾಮದ ಸರ್ವೆ ನಂ.342/2 ರಲ್ಲಿ 2 ಎಕರೆ ಜಮೀನಿಗೆ ಸಂಬಂಧಿಸಿದಂತೆ ಗಲಾಟೆ ಆಗಿರುವ ಬಗ್ಗೆ ನನ್ನ ಹೇಳಿಕೆಯಲ್ಲಿ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ . ಸದರಿ ಭಾಗವನ್ನು ನಿಡಿ.1 ಎಂದು ಗುರುತಿಸಲಾಯಿತು.

ಗಲಾಟೆ ಆಯಿತು ಎಂದು ಹೇಳಲಾದ ಸ್ಥಳದ ಅಕ್ಕ ಪಕ್ಕ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಗಲಾಟೆ ಆಯಿತು ಎಂದು ಹೇಳಲಾದ ಸಮಯದಲ್ಲಿ ಸುಮಾರು 20 ರಿಂದ 25 ಜನ ನಮ್ಮ ಊರಿನ ಗ್ರಾಮಸ್ಥರು ಇದ್ದರು. ಸದರಿ 20 ರಿಂದ 25 ಜನ ನಮ್ಮ ಊರಿನ ಗ್ರಾಮಸ್ಥರು ಸದರಿ ಗಲಾಟೆಯನ್ನು ಬಿಡಿಸಿರುವುದಿಲ್ಲ. ಸದರಿ 20 ರಿಂದ 25 ಜನರ ಹೆಸರು ವಿಳಾಸವನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಗಲಾಟೆಯು ಸುಮಾರು 15 ರಿಂದ 20 ನಿಮಿಷ ಆಗಿರುತ್ತದೆ. ಸದರಿ ಗಲಾಟೆಯ ಸಮಯದಲ್ಲಿ ಚಾಸಾ.1 ರವರ ಅಣ್ಣ ಮಹಾದೇವಸ್ವಾಮಿ ಇದ್ದರು. ಸದರಿ ಗಲಾಟೆಯಲ್ಲಿ ಚಾಸಾ.1 ರವರ ಅಣ್ಣ ಮಹಾದೇವಸ್ವಾಮಿರವರಿಗೆ ಗಾಯಗಳಾದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಗಲಾಟೆಯಲ್ಲಿ ಚಾಸಾ.1 ರವರ ಅತ್ತಿಗೆಗೆ ಗಾಯಗಳಾದ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ನಾನು ಚಾಸಾ.1 ರವರನ್ನು ಕಾರಿನಲ್ಲಿ ಆಸ್ಪತ್ರೆಗೆ ನಾನು ಒಬ್ಬನೇ ಕರೆದುಕೊಂಡು ಹೋಗಿರುತ್ತೇನೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡುವಾಗ ದಿನಾಂಕ 14.09.2014 ರಂದು ರಾತ್ರಿ ಚಿಕಿತ್ಸೆಗಾಗಿ ಅವರ ಸಂಬಂಧಿಯಾದ ನಮ್ಮ ಮಹಾದೇವಪುರ ಬೋರೆ ಗ್ರಾಮದ ವಾಸಿ ಅನಿಲ್ ರಾಜ್ ಬಿನ್ ಚಿನ್ನಸ್ವಾಮಿರವರ ಜೊತೆ ಯಾವುದೋ ಒಂದು ವಾಹನದಲ್ಲಿ ಮಂಡ್ಯದ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತಾರೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಸದರಿ ಭಾಗವನ್ನು ನಿಡಿ.2 ಎಂದು ಗುರುತಿಸಲಾಯಿತು.

ನಂತರ ನಾನು ಪೊಲೀಸರ ಮುಂದೆ ಹೇಳಿಕೆ ನೀಡುವಾಗ ಚಾಸಾ.1 ರವರು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರಿಂದ ಚಿಕಿತ್ಸೆ ಪಡೆದು ನಂತರ ವೈದ್ಯರ ಸಲಹೆ ಮೇರೆಗೆ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಸದರಿ ಭಾಗವನ್ನು ನಿಡಿ.3 ಎಂದು ಗುರುತಿಸಲಾಯಿತು.

ಚಾಸಾ.1 ರವರು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಯಾವ ದಿನಾಂಕದಂದು ದೂರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಚಾಸಾ.1 ರವರು ದೂರು ನೀಡಿದ ಮಾರನೆಯ ದಿನ ಸ್ಥಳ ಪಂಚನಾಮೆಗಾಗಿ ಪರಿಶೀಲನೆಗೆ ಬಂದಿರುತ್ತಾರೆ. ಸದರಿ ಗಲಾಟೆ ಆಯಿತು ಎಂದು ಹೇಳಲಾದ ದಿನದ ಮಾರನೆಯ ದಿನ ಪೊಲೀಸರು ಸ್ಥಳ ಪಂಚನಾಮೆಗಾಗಿ ಸದರಿ ಸ್ಥಳಕ್ಕೆ ಬಂದಿರುತ್ತಾರೆ. ಸದರಿ ಪಂಚನಾಮೆಯ ಕಾಲಕ್ಕೆ ನನ್ನನ್ನು ಮತ್ತು ಚಾಸಾ.1 ರವರನ್ನು ಹೊರತುಪಡಿಸಿ ಎಷ್ಟು ಜನ ಇದ್ದರು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಪಂಚನಾಮೆಯ ಕಾಲಕ್ಕೆ 2 ಅಥವಾ 3 ಜನ ಪೊಲೀಸರು ಹಾಜರಿದ್ದರು. ಸದರಿ ಪಂಚನಾಮೆಯ ಕಾಲಕ್ಕೆ ಪೊಲೀಸರು ಸದರಿ ಸ್ಥಳದ ಫೋಟೋವನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯ ಕಾಲಕ್ಕೆ ಪೊಲೀಸರು ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 5 ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ. ಎಂ.ಒ.1 ರಿಂದ 5 ರ ಮೇಲೆ ನಾನು ಯಾವುದೇ ವಿಶಿಷ್ಟ ಗುರುತುಗಳನ್ನು ಮಾಡಿರುವುದಿಲ್ಲ.

ನಾನು ಮತ್ತು ಚಾಸಾ.1 ರವರು ಒಂದೇ ಗ್ರಾಮದವರು ಮತ್ತು ವಿಶ್ವಾಸಿತರು ಎಂದರೆ ಸರಿ. ಚಾಸಾ.1 ಮತ್ತು ಆರೋಪಿತರ ಜಮೀನುಗಳು ಅಕ್ಕ ಪಕ್ಕ ಇದ್ದುದರಿಂದ ಚಾಸಾ.1 ರವರಿಗೆ ಆರೋಪಿತರ ವಿರುದ್ಧ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಚಾಸಾ.1 ರವರು ನನ್ನ ವಿಶ್ವಾಸಿತರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹಾ ಆರೋಪಿತರ ವಿರುದ್ಧ ಚಾಸಾ.1 ರವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪೊಲೀಸರು ನಮ್ಮ ಊರಿಗೆ ಬಂದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಎಂ.1 ರಿಂದ 5 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.